ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹಾನಿಯ ಬಗ್ಗೆ

497 ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1989–90 ಮತ್ತು 1990–91ನೇ ಸಾಲುಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಆಗಿರುವ ಹಾನಿಯ ಅಂದಾಜು ಎಷ್ಟು ;

ಆ) ಈ ಬಗ್ಗೆ ಎರಡು ವರ್ಷಗಳಲ್ಲಿ ಎಷ್ಟು ಪರಿಹಾರ ಹಣ ಕೊಡಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) 1989–90 ರೂ. 15,26,30,060.00

1990–91 ರೂ. 17,62,35,000.00

ಆ) 1989–90 ರೂ. 11,55,100.00

1990–91 ರೂ. 40,00,000.00

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– 1989–90 ರಿಂದ ಎಷ್ಟು ಲುಕ್ಸಾನಾಗಿದೆ ಎಂದರೆ 15 ಕೋಟಿ 26 ಲಕ್ಷ ಎಂದು ಹೇಳಿದ್ದೀರಿ. ನೀವು ಪರಿಹಾರ ಕೊಟ್ಟಿರತಕ್ಕದ್ದು 11 ಲಕ್ಷದ 55 ಸಾವಿರ ರೂಪಾಯಿಗಳು. 90–91ರಲ್ಲಿ 17 ಕೋಟಿ 62 ಲಕ್ಷ ರೂಪಾಯಿ ಲುಕ್ಸಾನಾಗಿದ್ದರೆ 40 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದೀರಿ. ಹೀಗಾದರೆ ಯಾವ ರೀತಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ? ಮಳೆ ಬಿದ್ದು ರಸ್ತೆಗಳು ಹಾಳಾಗಿವೆ, ಸೇತುವೆಗಳು ಒಡೆದು ಹೋಗಿವೆ, ಕಟ್ಟಡಗಳು ಕುಸಿದಿವೆ. ಅದಕ್ಕೆ ಸರ್ಕಾರದ ವರದಿ ಪ್ರಕಾರ ಏಕೆ ಹಣವನ್ನು ಕೊಡಲಿಲ್ಲ? ಮುಂದೆಯಾದರೂ ಪೂರ್ಣ ಹಣ ಕೊಡುತ್ತೀರಾ ಅಥವಾ ಏನು ಮಾಡುತ್ತೀರಿ? ಮುಂದಿನ ಪರಿಸ್ಥಿತಿ ಏನಿದೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಹಾನಿ ಒಟ್ಟು ಹಾನಿ ಎಷ್ಟಾಗಿದೆ ಎಂದು ಕೇಳಿದ್ದೀರಿ; ಅದಕ್ಕೆ ರಿಲೀಫ್ ಎಷ್ಟು ಕೊಡಬಹುದೋ ಅಷ್ಟು ಕೊಡಬಹುದೇ ಹೊರತು ಯಾವುದೇ ಸರ್ಕಾರವಾಗಲಿ ಸಂಪೂರ್ಣ ಹಾನಿಯನ್ನು ತುಂಬಿಕೊಡುವುದಿಲ್ಲ. ಹಿಂದೆಯೂ ಕೊಟ್ಟಿಲ್ಲ, ಮುಂದೆಯೂ ಕೊಡುವುದಿಲ್ಲ. ಫ್ಲಡ್ ರಿಲೀಫ್ ವರ್ಕ್ಸ್ ಡ್ರಾಟ್ ರಿಲೀಫ್ ವರ್ಕ್ಸ್ ಏನು ತೆಗೆದುಕೊಳ್ಳಬೇಕು ಆ ಮಟ್ಟಿಗೆ ಸಹಾಯ ಮಾಡುತ್ತೇವೆ. ಜಿಲ್ಲಾಧಿಕಾರಿಗಳ ವರದಿ ಪ್ರಕಾರ ಈ ವರ್ಷ 40 ಲಕ್ಷ ರೂಪಾಯಿಗಳನ್ನು, ಕಳೆದ ವರ್ಷ 11 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತೇನಾದರೂ ಹಣ ಬೇಕೆಂದು ಡಿ.ಸಿ. ಯವರಿಂದ ವರದಿ ಬಂದರೆ, ರಸ್ತೆ ರಿಪೇರಿ, ಕೆರೆ ರಿಪೇರಿ ಮಾಡುವುದಕ್ಕೆ ಸಹಾಯ ಮಾಡಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಪರಿಹಾರ ಸ್ವಲ್ಪ ಮಾತ್ರ ನಾವು ಕೊಡಬಹುದು ಪೂರ್ತಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಗೌರ್ನರ್ ಆಡಳಿತ ಇದ್ದಾಗ ಹೆಲಿಕ್ಯಾಪ್ಟರ್‌ನಲ್ಲಿ ಬೇಕಾದಷ್ಟು ತಿರುಗಾಡಿ ಖರ್ಚು ಮಾಡಿದರು. ಅದೇ ದುಡ್ಡು ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಆದರೆ ಆ ದುಡ್ಡು ಸಹ ಕೊಡಲಿಲ್ಲ. ಜನರ ಪರಿಸ್ಥಿತಿ ಏನಾಗಿದೆ ಎಂದರೆ ವರದಿ ಬರುತ್ತಿದೆ, ಏನಾದರೂ ಕೊಡುತ್ತಾರೆ ಎಂದು ಜನ ತಿಳಿದುಕೊಳ್ಳುತ್ತಾರೆ. ಹಿಂದಿನ ಸರ್ಕಾರದಲ್ಲಿ ಕೆಲವು ಜನರು ಹೋಗಿ ವಾಪಸ್ ಬಂದರು. ಅವರೂ ಸಹ ಏನೂ ಕೊಡಲಿಲ್ಲ. ಜನರಿಗೆ ಏನು ಅನ್ನಿಸಿದೆ ಅಂದರೆ, ಬರೀ ಓಡಾಡಿ ಹೋಗಿಬರುತ್ತಾರೆ, ದುಡ್ಡು ಮಾತ್ರ ಕೊಡುವುದಿಲ್ಲ ಅನ್ನಿಸಿದೆ. ಪರಿಸ್ಥಿತಿ ಹೀಗಾದರೆ ಏನು ಗತಿ? ರೋಡ್ ಹಾಗೇ ಇದೆ. ನಾಲೆಗಳಿವೆ, ನೀರಿಲ್ಲ. ಯಾವುದು ಅವಶ್ಯಕತೆ ಇದೆ ಅದರ ಬಗ್ಗೆ ನೋಡಬೇಕು. ಯಾವ ರಸ್ತೆಯಲ್ಲೂ ಬಸ್ಸುಗಳು ಓಡಾಡುವುದಕ್ಕಾಗುವುದಿಲ್ಲ. ಅದನ್ನು ಕೂಡಲೇ ಸರಿ ಮಾಡಬೇಕು. ತಾವಾದರೂ ನೋಡಿ ಏನಾದರೂ ಉದ್ಧಾರ ಮಾಡುತ್ತೀರಾ? ಪರಿಶೀಲನೆ ಮಾಡುವುದು ಬೇಡ, ದಯವಿಟ್ಟು ಏನಾದರೂ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಅಧ್ಯಕ್ಷರೆ, ಅವರು ಶಾಸಕರಾಗಿರಲಿಲ್ಲ. ಆಗಲೂ ಅವರ ಕಾನ್‌ಸ್ಟಿಟ್ಯೂಯೆನ್ಸಿಗೆ ನಾನು ಹೋಗಿದ್ದೆ. ಅವರೂ ಇರಲಿಲ್ಲ, ಮಾಣಿಕರಾವ್ ಪಾಟೀಲ್ ಅವರೂ ಇರಲಿಲ್ಲ ಆಗ. ಅವರು ಕೇಳದೇ ಇದ್ದರೂ ಅವರಿಗೆ ಹೈಸ್ಕೂಲ್ ಬಿಲ್ಡಿಂಗ್ ಕೊಟ್ಟಿ ರಸ್ತೆಗಳನ್ನು ಮಾಡಿಸಿಕೊಟ್ಟಿ ಈಗಾಗಲೇ 40 ಲಕ್ಷ ರೂಪಾಯಿ ಬಿಡುಗಡೆ ಆಗಿದೆ. ಸಣ್ಣಪುಟ್ಟ ಕೆಲಸ ಇದ್ದರೆ ಸಾಧ್ಯವಾದಷ್ಟು ಮಟ್ಟಿಗೆ ಸರ್ಕಾರ ಸಹಾಯ ಮಾಡುತ್ತದೆಂದು ಸೌಜನ್ಯದಿಂದ ಹೇಳುತ್ತಿದ್ದೇನೆ. ಅದನ್ನು ಕೇಳುವುದಕ್ಕೆ ಅವರು ತಯಾರಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :– ಮಾನ್ಯ ಸಚಿವರು ಸ್ಕೇರ್ಸಿಟಿ ರಿಲೀಫ್ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ ಮತ್ತು ಕೆಲಸ ನಡೆಯುತ್ತಿದೆ ಎಂದು ಹೇಳಿದರು. ಆದರೆ ನನ್ನ ಅನುಭವ ಏನೆಂದರೆ, ಹಣ ಜಿಲ್ಲಾಧಿಕಾರಿಗಳ ಹತ್ತಿರ ಬಿಡುಗಡೆಯಾಗುತ್ತಿದೆ. ಆದರೆ ಎಗ್ಸಿಕ್ಯುಟೀವ್ ಮೆಷಿನರಿ ಜಿಲ್ಲಾ ಪರಿಷತ್ ಹತ್ತಿರ ಇದೆ. ಮುಂಚೆ ಎಲ್ಲಾ ಡೆಪ್ಯುಟಿ ಕಮಿಷನರ್ ಮಾಡುತ್ತಿದ್ದರು, ಒಪ್ಪಿಕೊಳ್ಳುತ್ತೇನೆ. ಜಿಲ್ಲಾ ಪರಿಷತ್ ಬಂದನಂತರ ಎಲ್ಲಾ ಕೆಲಸಗಳನ್ನು ಜಿಲ್ಲಾ ಪರಿಷತ್ತು ನೋಡುತ್ತಿದೆ. ಹಣ ಡೆಪ್ಯುಟಿ ಕಮಿಷನರ್‌ಗೆ ರಿಲೀಸ್ ಮಾಡಿರುವುದರಿಂದ ಎಗ್ಸಿಕ್ಯೂಷನ್ ಜಿಲ್ಲಾ ಪರಿಷತ್ ಮೂಲಕ ಆಗುತ್ತಿರುವುದರಿಂದ ಸರಿಯಾಗಿ ಕೆಲಸ ಆಗುತ್ತಿಲ್ಲ. ಇಬ್ಬರಲ್ಲೂ ಕೋ–ಆರ್ಡಿನೇಷನ್ ಇಲ್ಲ. ಆ ದೃಷ್ಟಿಯಿಂದ ಕೋ–ಆರ್ಡಿನೇಷನ್ ತರುವುದಕ್ಕೆ ಮತ್ತು ಕೆಲಸವನ್ನು ಜಿಲ್ಲಾ ಪರಿಷತ್ತು ಮುಖಾಂತರ ಮಾಡಿಸುವುದಕ್ಕೆ ಏನಾದರೂ ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಸನ್ಮಾನ್ಯ ಅಧ್ಯಕ್ಷರೆ, ಹಣ ಮಾತ್ರ ಡೆಪ್ಯುಟಿ ಕಮೀಷನರ್‌ಗೆ ಕೊಡುತ್ತೇವೆ ಕೆಲಸವನ್ನು ಜಿಲ್ಲಾ ಪರಿಷತ್‌ನವರೇ ಮಾಡುತ್ತಾರೆ. ಅನೇಕ ಸಾರಿ ವ್ಯತ್ಯಾಸ ಇದೆ. ನಿನ್ನೆ ಕೌನ್ಸಿಲ್‌ನಲ್ಲಿ ಕೂಡ ಈ ಪ್ರಶ್ನೆ ಬಂದಿತ್ತು. ಈ ವಿಚಾರ ನಮ್ಮ ಅನುಭವಕ್ಕೂ ಬಂದಿದೆ, ತಮ್ಮ ಅನುಭವಕ್ಕೂ, ಬಂದಿದೆ. ನಮ್ಮ ಗಮನಕ್ಕೆ ಬಂದ ಮೇಲೆ ಡೆಪ್ಯುಟಿ ಕಮಿಷನರ್‌ಗೆ ಲೆಟರ್ ಬರೆದಿದ್ದೇವೆ. ಸ್ಕೇರ್ಸಿಟಿ ಕೆಲಸ ನ್ಯಾಚುರಲ್ ಕೆಲ್‌ಮಿಟೀಸ್ ಫಂಡ್‌ನಲ್ಲಿ ಆವರೇ ಎಗ್ಸಿಕ್ಯೂಟ್ ಮಾಡಬೇಕಾಗುತ್ತದೆ. ನಾವು ಹಣ ಬಿಡುಗಡೆ ಮಾಡಿದರೂ ಕೂಡ ಪಬ್ಲಿಕ್ ರೆಪ್ರಸೆಂಟೇಟೀವ್ಸ್ ಹೇಳುವ ಪ್ರಕಾರ, ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತಿನವರ ಹೇಳಿಕೆಯ ಮೇಲೆ ಇಂಥ ಕಡೆ ನೀರಿನ ಕೊರತೆ ಇದೆ ಎಂದರೆ ಅಂಥ ಊರಿನಲ್ಲಿ ಬಾವಿಯನ್ನು ಕೊರೆಯಬೇಕು ಎಂದು ಹೇಳಿದರೆ, ಅಲ್ಲಿ ಕೊರೆಯುತ್ತಾರೆ. ನಾನ್ ಆಫೀಷಿಯಲ್ಸ್ ವರ್ಸಸ್ ಡೆಪ್ಯುಟಿ ಕಮಿಷನರ್ ಸಮಸ್ಯೆ ಬಂದಾಗ ಮಾತ್ರ ತಾಪತ್ರಯ ಆಗುತ್ತದೆ. ಆದರೆ ಎಗ್ಸಿಕ್ಯುಟೀವ್ ಮೆಷಿನರಿ ಏನಿದೆ, ಅವರು ಇದಕ್ಕೆ ಒಬ್ಲ್ಗೆಜ್ ಮಾಡಲೇಬೇಕಾಗುತ್ತದೆ. ಇದಕ್ಕಾಗಿ ಕೋ–ಆರ್ಡಿನೇಷನ್ ಇಟ್ಟುಕೊಂಡು ಬಡವರಿಗೆ ಸಹಾಯ ಮಾಡಬೇಕು, ನೀವು ನೀವು ಕಚ್ಚಾಡಬಾರದು ಎಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ.

ಶ್ರೀ ಆರ್.ವಿ. ಡೇಶಪಾಂಡೆ :– ಸ್ಕೇರ್ಸಿಟಿ ರಿಲೀಫ್ ಕಮಿಟಿಗೆ ಡೆಪ್ಯುಟಿ ಕಮಿಷನರ್ ಚೇರ್ಮನ್ನರು. ಜಿಲ್ಲಾ ಪರಿಷತ್ ಅಧ್ಯಕ್ಷರು ಸದಸ್ಯರು. ಇದು ಹೊಂದಾಣಿಕೆ ಆಗುತ್ತದೇನು? ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ರಾಜ್ಯ ಮಂತ್ರಿಗಳ ಸ್ಟೇಟಸ್ ಕೊಟ್ಟು ಅವರನ್ನು ಡೆಪ್ಯುಟಿ ಕಮಿಷನರ್ ಕೆಳಗೆ ಸದಸ್ಯರಾಗಿ ಕೂರಿಸಿದರೆ ಯಾವ ಪ್ರಕಾರ ಕೆಲಸ ಮಾಡುವುದಕ್ಕೆ ಸಾಧ್ಯ? ಇದನ್ನು ದಯಮಾಡಿ ಪರಿಶೀಲಿಸಬೇಕು ಎಂದು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಅವರು ಹೇಳಿದ್ದಾರೆ. ನಾನು ಪರಿಶೀಲಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮೊನ್ನೆ ಮಳೆ ಜಾಸ್ತಿಯಾಗಿ ಬಂಪಳ್ಳಿ ಊರು ಮುಳುಗಿಹೋಯಿತು. ಹೆಲಿಕ್ಯಾಪ್ಟರ್‌ನಿಂದ ಆಹಾರ ಹಾಕಿದ್ದಾರೆ. ಆದ್ದರಿಂದ ಬೇರೆ ಊರು ಸೃಷ್ಟಿ ಮಾಡುವುದಕ್ಕೆ ಸರ್ಕಾರದವರು ಹಣ ಕೊಡುತ್ತಾರಾ? ಅದಕ್ಕೇನಾದರೂ ವ್ಯವಸ್ಥೆ ಮಾಡುವುದಕ್ಕೆ ತಮ್ಮ ಹತ್ತಿರ ಯೋಜನೆ ಇದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಅದನ್ನು ಪರಿಶೀಲನೆ ಮಾಡುತ್ತೇನೆ. ತಕ್ಷಣ ಮಾಡಿಕೊಡುತ್ತೇನೆ ಎಂದು ಹೇಳುವುದಕ್ಕೆ ಅದರ ಇಂಪ್ಲಿಕೇಷನ್ಸ್ ಏನು, ಎಷ್ಟು ಹಣ ಬೇಕಾಗುತ್ತದೆ. ಎಂಬ ಬಗ್ಗೆ ಸಂಪೂರ್ಣವಾದ ವರದಿ ಆ ಊರಿನದ್ದು ಇಲ್ಲ. ಅವರು ಡೀಟೈಲಾಗಿ ಪ್ರಶ್ನೆ ಕೇಳಿದ್ದಕ್ಕೆ ಸಮಗ್ರವಾಗಿ ಜೆಲ್ಲ ಬಗ್ಗೆ ಹೇಳಿದ್ದೇನೆ. ಈಗ ಪೂರ್ತಿ ಡೀಟೈಲ್ಸ್ ಇಲ್ಲ. ಬೇಕಾದರೆ ಡೀಟೈಲ್ಸ್ ತರಿಸಿಕೊಂಡು ಸರ್ಕಾರ ಏನು ಮಾಡಬೇಕು ಎಂದು ಪರಿಶೀಲಿಸುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :– ಜಿಲ್ಲಾ ಪರಿಷತ್‌ನ ಹೊಂದಾಣಿಕೆಯಿಂದ ಈ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಜಿಲ್ಲಾ ಪರಿಷತ್ ಬಿಟ್ಟೇ ಮಾಡಬೇಕು. ಅವರು ಹೇಳಿದ್ದರಿಂದ ನಾನು ಈ ಮಾತು ಹೇಳಬೇಕಾಯಿತು.

ಉಪಾಧ್ಯಕ್ಷರು :– ಈಗ ಶ್ರೀ ಸುಭಾಷ್ ಜೋಶಿಯವರ ಪ್ರಶ್ನೆ.

ಶ್ರೀ ಎಸ್.ಹೆಚ್. ಕೌಜಲಗಿ :– ಇದೇ ಪ್ರಶ್ನೆಯನ್ನು ನಾನೂ ಕೇಳಿದ್ದು ಆದು ಚುಕ್ಕೆ ರಹಿತ ಪಟ್ಟಿಯಲ್ಲಿ ಬಂದಿದೆ. ಆದ್ದರಿಂದ ಈ ಪ್ರಶ್ನೆ ಬಗ್ಗೆ ನಾನು ಉಪಪ್ರಶ್ನೆ ಕೇಳುತ್ತೇನೆ.

ಉಪಾಧ್ಯಕ್ಷರು :– ನಿಮಗೆ ಶ್ರೀ ಜೋಶಿಯವರು ಆಥರೈಸೇಷನ್ ಕೊಟ್ಟಿದ್ದಾರಾ?

ಶ್ರೀ ಎಸ್.ಹೆಚ್. ಕೌಜಲಗಿ :– ಕೊಟ್ಟಿಲ್ಲ.

ಉಪಾಧ್ಯಕ್ಷರು :– ಹಾಗಿದ್ದರೆ ಆಗುವುದಿಲ್ಲ. ಈಗ ಮುಂದೆ ಪಿ.ಸಿ. ಸಿದ್ದನಗೌಡರ್ ಅವರ ಪ್ರಶ್ನೆ. ಸಿದ್ದನಗೌಡರ್ ಅವರೇ ನಿಮ್ಮ ಪ್ರಶ್ನೆಯನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಲಾಗುವುದು. ಈಗ ಮುಂದಿನ ಪ್ರಶ್ನೆ.

ಶ್ರೀಮತಿ ಮೋಟಮ್ಮ :– ಉಪಾಧ್ಯಕ್ಷರೇ, ಸಿದ್ದನಗೌಡರ್‌ರವರು ಕೇಳಿರುವ ಪ್ರಶ್ನೆ ಬಹಳ ಪ್ರಾಮುಖ್ಯವಾದುದು.

ಶ್ರೀ ಪಿ.ಸಿ. ಸಿದ್ದನಗೌಡರ್ :– ಅಧ್ಯಕ್ಷರೇ, ನನಗೆ ಸರ್ಕಾರದಿಂದ ಈ ಪ್ರಶ್ನೆಗೆ ಉತ್ತರ ಬಂದಿದೆ.

ಶ್ರೀಮತಿ ಮೋಟಮ್ಮ : ಈ ಪ್ರಶ್ನೆ ಅಂಬೇಡ್ಕರ್ ಜನ್ಮಶತಾಬ್ದಿ ವರ್ಷಾಚರಣೆಯ ಸಲುವಾಗಿ ಇದೆ. ಮತ್ತೆ ಮೊನ್ನೆ ಪರಿಶಿಷ್ಟ ಜಾತಿ ವರ್ಗದವರ ಬಗ್ಗೆ ಬಂದ ಪ್ರಶ್ನೆಯೂ ಮುಂದೆ ಹೋಯಿತು. ಇಂತಹ ಪ್ರಶ್ನೆಗಳು ಮುಂದೆ ಹೋದರೆ ಹೇಗೆ?

ಉಪಾಧ್ಯಕ್ಷರು :– ಈ ವಿಷಯ ನಾಳೆ ಚರ್ಚೆಗೆ ಬರುತ್ತದೆ. ಈಗ ಶ್ರೀ ಬಿ. ಶಿವರಾಮು ಅವರ ಪ್ರಶ್ನೆ. ಮಾನ್ಯ ಸದಸ್ಯರು ಗೈರು ಹಾಜರಿದ್ದಾರೆ. ಈಗ ಮುಂದೆ ಶ್ರೀಮತಿ ಮನೋರಮಾ ಮದ್ವರಾಜ್ ಅವರ ಪ್ರಶ್ನೆ.

ಶ್ರೀ ಬಿ.ಎಂ. ಇದಿನಬ್ಬ :– ಉಪಾಧ್ಯಕ್ಷರೇ, ಈ ಪ್ರಶ್ನೆ ಬಗ್ಗೆ ನಾನು ಆಥರೈಸೇಷನ್ ಲೆಟರನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ನಾನು 617(ಎ)ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಉಪಾಧ್ಯಕ್ಷರೇ, ಈ ಪ್ರಶ್ನೆ ಮುಂದೂಡುವ ಬಗ್ಗೆ ನಾನು ತಮಗೆ ಪತ್ರವನ್ನು ಕಳುಹಿಸಿದ್ದೇನೆ.

ಉಪಾಧ್ಯಕ್ಷರು :– ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಟೈಮ್ ಕೇಳಿದ್ದಾರೆ. ಈಗ ಮುಂದೆ ಶ್ರೀ ಮಲ್ಲಾರಗೌಡ ಎಸ್. ಪಾಟೀಲ್‌ರವರ ಪ್ರಶ್ನೆ. ಇದಕ್ಕೂ ಕೂಡಾ ಮಾನ್ಯ ಸಚಿವರು ಟೈಮ್ ಕೇಳಿದ್ದಾರೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ :– ಈ ಪ್ರಶ್ನೆಗೂ ಮಾನ್ಯ ಕಂದಾಯ ಮಂತ್ರಿಗಳು ಟೈಮ್ ಕೇಳಿದರೆ ಬಹಳ ದುಃಖವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ :– 75 ಪರ್ಸೆಂಟ್ ಪ್ರಶ್ನೆಗಳಿಗೆ ಟೈಮ್ ಕೇಳುತ್ತಿದ್ದಾರೆ. ನಿನ್ನೆ ಧರಣಿ ಆಯಿತು. ಸೋಮವಾರದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಟೈಮ್ ಕೇಳುವುದಾದರೆ ಪ್ರಶ್ನೆ ಕೇಳಲು ಟೈಮ್ ಏಕೆ ನಿಗದಿ ಮಾಡಬೇಕು? ಪ್ರಶ್ನೆಗಳನ್ನೇ ಹಾಕಬೇಡಿ ಎಂದು ತಾವು ಹೇಳಿ. ಬರುವ 20 ಪ್ರಶ್ನೆಗಳಲ್ಲಿ 10 ಹೀಗೇ ಆದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ನನಗೆ ಸಂಬಂಧಪಟ್ಟ 10 ಪ್ರಶ್ನೆಗಳಲ್ಲಿ 3ಕ್ಕೆ ಟೈಮ್ ಕೇಳಿದ್ದು, 7ಕ್ಕೆ ನಾವು ರೆಡಿಯಿದ್ದೇವೆ.

ಶ್ರೀ ಮಲ್ಲಾರಗೌಡ ಎಸ್ ಪಾಟೀಲ್ :– ನನ್ನ ಪ್ರಶ್ನೆ ಅವರ ಏರಿಯಾಕ್ಕೆ ಸಂಬಂಧಪಟ್ಟ ಪ್ರಶ್ನೆ ಇದೆ. ಹೆಚ್ಚು ಮಳೆ ಅವರ ಏರಿಯಾದಲ್ಲೇ ಆಗಿದೆ. ಇದಕ್ಕೂ ಇನ್‌ಫರ್ಮೇಷನ್ ಇಲ್ಲ ಎಂದರೆ ಹೇಗೆ? ಏಕೆ ಟೈಮ್ ಕೇಳುತ್ತಿದ್ದಾರೆ?

ಉಪಾಧ್ಯಕ್ಷರು :– ಮುಂದಿನ ಪ್ರಶ್ನೆ ಆರ್.ಎನ್. ನಾಯಕ್‌ರವರದ್ದು. ಅವರು ಗೈರುಹಾಜರಿದ್ದಾರೆ. ಮುಂದಿನ ಪ್ರಶ್ನೆ ರಾಮಲಿಂಗರೆಡ್ಡಿಯವರದ್ದು.

ಶ್ರೀ ಎಂ. ವೀರಪ್ಪ ಮೊಯ್ಲಿ :– ದಿನದ ಒಂದೆರಡು ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ. ಆದರೆ 60 ಪರ್ಸೆಂಟ್ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ ಎಂದರೆ ಹೇಗೆ? ಇಂಥದ್ದು 5 ಅಥವಾ 7 ಪರ್ಸೆಂಟ್ ಇರಬಹುದು. ಸನ್ಮಾನ್ಯ ಅಧ್ಯಕ್ಷೆಣೀಯವರೇ, ನಮ್ಮ ಕಷ್ಟವನ್ನು ತಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸಮಯ ಬಹಳ ಕಡಿಮೆ ಇರುತ್ತದೆ. ಇದು ದೇಶಪಾಂಡೆಯವರಿಗೂ, ಏಕಾಂತಯ್ಯನವರಿಗೂ ಗೊತ್ತಿದೆ. ರಾತ್ರಿ 10 ಗಂಟೆಗೆ ನಮಗೆ ಉತ್ತರಗಳು ಬರುತ್ತವೆ. ಅವಕ್ಕೆ ನಾವು ಆ ಸಮಯದಲ್ಲಿ ದಸ್ಕತ್ತು ಹಾಕುತ್ತೇವೆ. ಈ ಬಗ್ಗೆ ನಿಯಮಾವಳಿಯನ್ನು ನಾವು ಬದಲಾವಣೆ ಮಾಡಬೇಕಾಗುತ್ತದೆ. ಈಗ ಇರುವ ನಿರ್ಣಯದಲ್ಲಿ ಸಮರ್ಪಕವಾದ ಉತ್ತರ ಕೊಡುವುದಕ್ಕಾಗುವುದಿಲ್ಲ. ರಾತ್ರಿ 10–12 ಗಂಟೆಗೆ ದಸ್ಕತ್ತು ಹಾಕಿದ ಅನುಭವ ತಮಗೂ ಇದೆ. ಎಲ್ಲ ರೀತಿಯ ಪ್ರಯತ್ನಗಳನ್ನೂ ನಾವು ಮಾಡುತ್ತಿದ್ದೇವೆ. ರಾತ್ರಿಯೆಲ್ಲಾ ಕೂತು ಅಧಿಕಾರಿಗಳು ರಿಪ್ಲೈ ತಯಾರು ಮಾಡುತ್ತಾರೆ. ಕೆಲವು ಬಾರಿ ರಾತ್ರಿ 2 ಗಂಟೆಗೂ ನಾವು ದಸ್ಕತ್ತು ಹಾಕಿದ್ದೇವೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಮೊಯ್ಲಿಯವರು ಹೇಳುವುದನ್ನು ಒಪ್ಪುವುದಾದರೂ ನಾನು ಕಳೆದ ಅಧಿವೇಶನದಲ್ಲಿ ಕಳುಹಿಸಿದ ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಎಂ. ವೀರಪ್ಪ ಮೊಯಿಲಿ :– ನಾನು ಒಪ್ಪಲೇಬೇಕು. ನಾನು ಒಂದು ಮುಖ ಹೇಳಿದೆ. ಆದರೆ ಇದಕ್ಕೆ ನೆವ ಒಡ್ಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದು ಅದು ಅವರ ಹಕ್ಕು. ಅದಕ್ಕೆ ಉತ್ತರ ಕೊಡಬೇಕಾದ್ದು ನಮ್ಮ ಕರ್ತವ್ಯ. ಆ ಕರ್ತವ್ಯವನ್ನು ನಿಭಾಯಿಸಲಿಕ್ಕೆ ಎಲ್ಲ ರೀತಿಯ ಕ್ರಮ ತೆಗೆದುಕೊಳ್ಳುವುದು ನಮ್ಮ ಕರ್ತವ್ಯ.

ಶ್ರೀ ಸಿ. ಬೈರೇಗೌಡ :– ಕೆಲವು ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಏನಾದರೂ ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಅದರ ಅಪ್ಪರಾಣೆ ಉತ್ತರ ಬರುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ :– ಮಾನ್ಯ ಉಪಾಧ್ಯಕ್ಷೆಣೆಯವರೆ, ಇಲ್ಲಿ ಮತ್ತೊಂದು ಮುಖ್ಯವಾದ ಪ್ರಶ್ನೆ ಇದೆ. ಅಧಿವೇಶನ ಕರೆಯಬೇಕಾದರೆ ನಿಯಮಗಳ ಪ್ರಕಾರ ಒಂದು ತಿಂಗಳು ಕಡಿಮೆ ಇಲ್ಲದಂತೆ ಮತ್ತು 15 ದಿವಸಗಳಿಗೆ ಕಡಿಮೆ ಇಲ್ಲದಂತೆ ತಾವು ನಮಗೆ ಅವಕಾಶ ಕೊಡಬೇಕು. ಈ ಅವಕಾಶವನ್ನು ಕೊಡದಿರುವುದರಿಂದ ನಮಗಿಂತ ಹೆಚ್ಚು ನಿಮಗೂ ತೊಂದರೆ ಆಗಿದೆ. ಇನ್ನು ಮುಂದಾದರೂ ಸಹಿತ ಕನಿಷ್ಟ ಪಕ್ಷ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದಂತೆ ಒಂದು ನೀತಿಯನ್ನು ಅನುಸರಿಸದಿರುವುದರಿಂದ ಈ ತೊಂದರೆಯಾಗಿದೆ. ಪ್ರಶ್ನೆ ಕಳುಹಿಸುವುದಕ್ಕೆ ಹೆಚ್ಚು ಅವಕಾಶ ನಮಗೆ ಕೊಡುವುದರ ಮುಖಾಂತರ, ತಮಗೆ ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತದೆ, ಇದನ್ನು ತಾವು ಏತಕ್ಕೆ ಅನುಸರಿಸುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ :– ಮಾನ್ಯ ಉಪಾಧ್ಯಕ್ಷೆಣೀಯವರೆ, ಮಾನ್ಯ ಸದಸ್ಯರಾದ ಏಕಾಂತಯ್ಯನವರು ಏನು ಸೂಚನೆ ಕೊಟ್ಟಿದ್ದಾರೆ ಅದನ್ನು ನಾವು ಖಂಡಿತವಾಗಿಯೂ ಪರಿಗಣನೆ ಮಾಡುತ್ತೇವೆ. ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದಂತಹ ವಿಚಾರ ಆಲೋಚನೆ ಮಾಡಬೇಕಾದ್ದು, ನಾವು ಗಂಭೀರವಾಗಿ ಪರಿಶೀಲನೆ ಮಾಡತಕ್ಕದ್ದು ಇದೆ. ಅದಕ್ಕಾಗಿ ನಾನು ತಮ್ಮ ಕಚೇರಿಯಲ್ಲಿ ವ್ಯವಹರಿಸಿ ಯಾವ ಪ್ರಶ್ನೆಗಳನ್ನು ಕೇಳಿದ್ದಾರೆ ಆ ವಿಚಾರದಲ್ಲಿ ತನಿಖೆ ಮಾಡಿ ಉತ್ತರ ಬರಲಿಕ್ಕೆ ಏನು ತೊಂದರೆಯಿದೆ. ಅದನ್ನು ಖಂಡಿತಾ ವಿಚಾರ ಮಾಡಿ ತಮ್ಮ ಗಮನಕ್ಕೆ ತರುತ್ತೇವೆ.

ಶ್ರೀ ಬಿ. ಹೆಚ್. ಬನ್ನೀಕೋಡ್ :– ಮಾನ್ಯ ಉಪಾಧ್ಯಕ್ಷೆಣೀಯವರೆ, ಅಂಕಿ ಸಂಖ್ಯೆಯ ಬಗ್ಗೆ ಸಮಯಬೇಕು. ಸರ್ಕಾರದ ನೀತಿಯ ಬಗ್ಗೆ ಸಹ ಉತ್ತರ ಕೊಡುವುದಿಲ್ಲ.

ಉಪಾಧ್ಯಕ್ಷರು : ಈಗ ಮಾನ್ಯ ರಾಮಲಿಂಗರೆಡ್ಡಿಯವರು ಹಾಜರಿಲ್ಲ. ಶ್ರೀಯುತ ಹೆಚ್.ಎಂ. ರೇವಣ್ಣನವರು ಸಹ ಹಾಜರಿಲ್ಲ.

ರೈತರ ಬೆಳೆಗೆ ಅಣೇವಾರಿ ನಿರ್ದಿಷ್ಟಪಡಿಸುವ ಬಗ್ಗೆ

569. ಶ್ರೀ ಮಂಜುನಾಥ ಚನ್ನಪ್ಪ ಕುನ್ನೂರ (ಶಿಗ್ಗಾಂವ) :– ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಕಂದಾಯ ಇಲಾಖೆಯ ಅಧಿಕಾರಿಗಳು ರೈತರು ಬೆಳೆದ ಬೆಳೆಗಳ ಅಣೆವಾರಿ ನಿರ್ದಿಷ್ಟಪಡಿಸುವಾಗ ಖುದ್ದಾಗಿ ಜಮೀನುಗಳಿಗೆ ಭೇಟಿ ಕೊಡದೆಯೇ ಅಣೇವಾರಿ ತಯಾರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಸನ್ 1988–89ರಲ್ಲಿ 100ಕ್ಕೆ 50ರ ಮೇಲ್ಪಟ್ಟು ಅಣೇವಾರಿ ನಿಗದಿಪಡಿಸಿ ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ಅಣೇವಾರಿಯನ್ನು ಸರಿಪಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ಮಾಡಲಾಗಿದೆಯೇ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):–

ಅ) ಇಲ್ಲಾ

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ಶ್ರೀ ಮಂಜುನಾಥ ಚನ್ನಪ್ಪ ಕುನ್ನೂರ :– ಮಾನ್ಯ ಉಪಾಧ್ಯಕ್ಷೆಣೀಯವರೆ, ಶಿಗ್ಗಾಂವ್ ಮತ್ತು ಸವಣೂರು ತಾಲೂಕುಗಳಲ್ಲಿ 1988–89ನೇ ಸಾಲಿನ ಅಣೇವಾರಿಯನ್ನು ಮತ್ತೆ ಮಾಡತಕ್ಕ ಬಗ್ಗೆ ಪರಿಶೀಲನೆ ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದರೆ ನನ್ನ ಮತದಾರ ಕ್ಷೇತ್ರ ನಾಲ್ಕೈದು ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗಿದೆ. ಅಣೇವಾರಿ ಮಾಡತಕ್ಕ ಪದ್ಧತಿ ಬಹಳ ಕೆಟ್ಟ ಸಂಪ್ರದಾಯದ್ದು ಇದೆ. ರೈತರು ಬೆಳೆದಂತಹ ಬೆಳೆಗಳನ್ನು ಸರಿಯಾಗಿ ಅಣೇವಾರಿ ಮಾಡುತ್ತಿಲ್ಲ. ಈ ಪ್ರಶ್ನೆ ನೇರವಾಗಿ ಸಾಲ ಮನ್ನಾಕ್ಕೆ ಸಂಬಂಧಪಟ್ಟದ್ದು ಇದ್ದು, ನನ್ನ ಮತದಾರ ಕ್ಷೇತ್ರವೊಂದೇ ಅಲ್ಲ ಇಡೀ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ಕಾರಣದಿಂದ ನಮ್ಮ ಸರ್ಕಾರದವರು ಈ ಅಣೇವಾರಿ ಮಾಡುವಾಗ ಅನುಸರಿಸತಕ್ಕ ಪದ್ಧತಿ ಏನು? ಅದರಲ್ಲಿ ರೈತರು ಒಳಗೊಂಡಿದ್ದಾರೆಯೇ ಹೇಗೆ? ಅದರ ಬಗ್ಗೆ ವಿವರಣೆ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಉಪಾಧ್ಯಕ್ಷೆಣೀಯವರೆ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಡೆಪ್ಯುಟಿ ತಹಶೀಲ್ದಾರ್‌ರವರು ಟೋಟಲ್ 5 ಪರ್ಸೆಂಟ್ ಹಳ್ಳಿಗಳಿಗೆ ಭೇಟಿ ಕೊಟ್ಟು ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ ಮಾಡುತ್ತಾರೆ. ನಂತರ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಸ್ಯಾಂಪಲ್‌ಗೋಸ್ಕರ ಕೆಲವು ಪ್ಲಾಟ್‌ಗಳನ್ನು ಸ್ಯಾಂಪಲ್‌ಗೋಸ್ಕರ ತೆಗೆದುಕೊಂಡು ಅದರ ಮೇಲೆ ಆವರೇಜ್ ತೆಗೆದುಕೊಂಡು ಈ ಅಣೇವಾರಿ ಫಿಕ್ಸ್ ಮಾಡುತ್ತಾರೆ.

ಶ್ರೀ ಮಂಜುನಾಥ್ ಚನ್ನಪ್ಪ ಕುನ್ನೂರ :– ಈ ಪದ್ಧತಿಯನ್ನು ತೆಗೆದುಹಾಕಿ ಪುನಃ ಅಣೇವಾರಿ ಮಾಡಲಿಕ್ಕೆ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಕೆಲವೊಂದು ಕಾಗದ ಪತ್ರಗಳನ್ನು ಕೂಡ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ನಮ್ಮ ಮತದಾರ ಕ್ಷೇತ್ರದಲ್ಲಿ ಬರತಕ್ಕ ಎಲೂಗಿ ಗ್ರಾಮದಲ್ಲಿ ಸರ್ವೆ ನಂ. 5(ಅ) ಮತ್ತು 74(2)ಎ ಇಲ್ಲಿ ಹೈಬ್ರಿಡ್ ಜೋಳ ಪೀಕ್ ಪಹಣಿಯಲ್ಲಿ